ಸ್ವಯಮೇವ ಮೃಗೇಂದ್ರತಾ

# ವಿಕ್ರಮ

# ಸಾಮಾಜಿಕ ಪ್ರಜ್ಞೆ ಬದಲಾದರೆ ಆರೋಗ್ಯ ಕ್ಷೇತ್ರದಲ್ಲೂ ಸುಧಾರಣೆ ಸಾಧ್ಯ

## ಸಂದರ್ಶನ

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ MBBS ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಒಂದು ವರ್ಷ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮವನ್ನು ರಾಜ್ಯ ಸರ್ಕಾರ ರದ್ದುಗೊಳಿಸಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಸೇವೆಗಳು  ಕೇವಲ ನಗರ ಪ್ರದೇಶಗಳಿಗೆ ಸೀಮಿತವೇ? ಗ್ರಾಮೀಣ ಭಾಗದ ಜನರ ಆರೋಗ್ಯ ಕಾಳಜಿ ಗೌಣವಾದದ್ದು ಏಕೆ? ಇತ್ಯಾದಿ ಚರ್ಚೆಗಳು ನಡೆಯುತ್ತಿವೆ. ಪ್ರಸ್ತುತ ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿರುವ ಸವಾಲುಗಳು, ಸರ್ಕಾರ ಮತ್ತು ಸಮಾಜದ ಹೊಣೆಗಾರಿಕೆ, ಆರೋಗ್ಯ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆ ಮೊದಲಾದವುಗಳು ವಿಶ್ಲೇಷಣೆಗೆ ಒಳಪಡುತ್ತಿವೆ. ಈ ಎಲ್ಲ ಸಂಗತಿಗಳ ಕುರಿತು ಖ್ಯಾತ ಹೋಮಿಯೋಪತಿ ವೈದ್ಯ, ಲೇಖಕ ನಾಡೋಜ ಡಾ. ಬಿ. ಟಿ. ರುದ್ರೇಶ್ ಅವರು ಉಪಸಂಪಾದಕಿ ದಿವ್ಯಾ ಹೆಗಡೆ ಕಬ್ಬಿನಗದ್ದೆಯವರೊಂದಿಗೆ ಚರ್ಚಿಸಿದ್ದಾರೆ.



**ಈ ವಾರ ವಿಕ್ರಮದಲ್ಲಿ ನಿರೀಕ್ಷಿಸಿ**

ವಿಕ್ರಮ ಲೇಖನಗಳ ಕುರಿತು ತಮ್ಮ ಅಭಿಪ್ರಾಯವನ್ನು
9611766820ಗೆ ವಾಟ್ಸಾಪ್ ಮಾಡಿ

**ಚಂದಾದಾರರಾಗಲು ಭೇಟಿ ನೀಡಿ**

**www.vikrama.in 8861209135**

## ಮುಖಪುಟ ಸಂದರ್ಶನ

**ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ MBBS ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಒಂದು ವರ್ಷ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮವನ್ನು ರಾಜ್ಯ ಸರ್ಕಾರ ರದ್ದುಗೊಳಿಸಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಸೇವೆಗಳು ಕೇವಲ ನಗರ ಪ್ರದೇಶಗಳಿಗೆ ಸೀಮಿತವೇ? ಗ್ರಾಮೀಣ ಭಾಗದ ಜನರ ಆರೋಗ್ಯ ಕಾಳಜಿ ಗೌಣವಾದದ್ದು ಏಕೆ? ಇತ್ಯಾದಿ ಚರ್ಚೆಗಳು ನಡೆಯುತ್ತಿವೆ. ಪ್ರಸ್ತುತ ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿರುವ ಸವಾಲುಗಳು, ಸರ್ಕಾರ ಮತ್ತು ಸಮಾಜದ ಹೊಣೆಗಾರಿಕೆ, ಆರೋಗ್ಯ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆ ಮೊದಲಾದವುಗಳು ವಿಶ್ಲೇಷಣೆಗೆ ಒಳಪಡುತ್ತಿವೆ. ಈ ಎಲ್ಲ ಸಂಗತಿಗಳ ಕುರಿತು ಖ್ಯಾತ ಹೋಮಿಯೋಪತಿ ವೈದ್ಯ, ಲೇಖಕ ನಾಡೋಜ ಡಾ. ಬಿ. ಟಿ. ರುದ್ರೇಶ್ ಅವರು ಉಪಸಂಪಾದಕಿ ದಿವ್ಯಾ ಹೆಗಡೆ ಕಬ್ಬಿನಗದ್ದೆಯವರೊಂದಿಗೆ ಚರ್ಚಿಸಿದ್ದಾರೆ.**

# ಸಾಮಾಜಿಕ ಪ್ರಜ್ಞೆ ಬದಲಾದರೆ ಆರೋಗ್ಯ ಕ್ಷೇತ್ರದಲ್ಲೂ ಸುಧಾರಣೆ ಸಾಧ್ಯ

- **ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ MBBS ಓದಿದ ವ್ಯಕ್ತಿಯು ಗ್ರಾಮೀಣ ಪ್ರದೇಶದಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕೆಂಬ ನಿಯಮವಿತ್ತು. ಈಗ ರಾಜ್ಯ ಸರ್ಕಾರ ಆ ನಿಯಮವನ್ನು ರದ್ದುಗೊಳಿಸಿದೆ. ಸರ್ಕಾರದ ಈ ನಿಲುವಿನ ಉದ್ದೇಶವೇನು? ವೈದ್ಯರ ಸೇವೆ ಕೇವಲ ನಗರ ಪ್ರದೇಶಕ್ಕೆ ಸೀಮಿತವಾಗಬೇಕೆ? ಗ್ರಾಮೀಣ ಭಾಗದ ಜನರ ಆರೋಗ್ಯದ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಧೋರಣೆ ತಾಳುತ್ತಿದೆಯೇ?**

– ಆ ನಿಯಮದ ರದ್ದತಿ ಸರಿಯೇ ತಪ್ಪೇ ಎಂಬುದಕ್ಕಿಂತ ಇನ್ನೊಂದು ಮುಖದಲ್ಲಿ ಈ ವಿಷಯವನ್ನು ಚರ್ಚಿಸುವ ಅಗತ್ಯವಿದೆ. ಮೊದಲನೆಯದಾಗಿ ಆರೋಗ್ಯ ಶಿಕ್ಷಣದ ವ್ಯವಸ್ಥೆ ಆಮೂಲಾಗ್ರವಾಗಿ ಬದಲಾಗಬೇಕು. ಪ್ರತಿ ಜಿಲ್ಲೆಗೆ ಒಂದು ಮೆಡಿಕಲ್ ಕಾಲೇಜು ನಿರ್ಮಾಣವಾಗಬೇಕು. ಅದಾಗದಿದ್ದರೆ, ಪ್ರತಿ ಜಿಲ್ಲೆಗೆ 3 ವರ್ಷದ ಒಂದು ಡಿಪ್ಲೊಮೊ ಕೋರ್ಸ್ ಅನ್ನು ಆರಂಭಿಸಬೇಕು. ಅಲ್ಲಿ ಅದೇ ಜಿಲ್ಲೆಯ ವಿದ್ಯಾರ್ಥಿಗೆ ಕಲಿಯುವ ಅವಕಾಶ ಮಾಡಿಕೊಡಬೇಕು. ಆತ ಅಲ್ಲಿಯೇ ಕರ್ತವ್ಯ ನಿರ್ವಹಿಸುವಂತೆ ನಿಯಮ ರೂಪಿಸಬೇಕು. ಆತನಿಗೆ ಒಂದು ಹಳ್ಳಿಗೆ ತೀರಾ ಅಗತ್ಯವಾದ ಚಿಕಿತ್ಸೆಯನ್ನು ಕಲಿಸಿಕೊಡಬೇಕು. ಇದರಿಂದ ಎಲ್ಲಿಯದೋ ವಿದ್ಯಾರ್ಥಿ ಯಾವುದೋ ಹಳ್ಳಿಗೆ ಬಂದು ನೆಲೆಯೂರುವ, ಅಲ್ಲಿ ಬೇಕಾದಂತಹ ವ್ಯವಸ್ಥೆಗಳನ್ನು ಕಲ್ಪಿಸಿಕೊಳ್ಳುವ ಸಮಸ್ಯೆ ಇಲ್ಲವಾಗುತ್ತದೆ. ಸ್ಥಳೀಯ ವಿದ್ಯಾರ್ಥಿಗಳಿಗೂ ತಮ್ಮದೇ ಊರಿನಲ್ಲಿ ಉದ್ಯೋಗ ಮಾಡುವ ಅವಕಾಶ ದೊರೆಯುತ್ತದೆ.

- **ವೈದ್ಯಕೀಯ ಶಿಕ್ಷಣ ಅತಿ ದುಬಾರಿಯಾಗಿದೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅದು ಗಗನ ಕುಸುಮವೇ ಸರಿ. ಈ ಪರಿಸ್ಥಿತಿ ಬದಲಾಗುವುದು ಯಾವಾಗ? ಇಂಥ ವಾತಾವರಣ ಸೃಷ್ಟಿಯಾಗಲು ಕಾರಣವೇನು?**

– ಬಡತನ ಇಂದಿಗೂ ಸಮಾಜವನ್ನು ದಟ್ಟವಾಗಿ ಕಾಡುತ್ತಿದೆ. ಹೊತ್ತು ಊಟಕ್ಕೂ ಪರದಾಡುವ, ಅತ್ಯಂತ ನಿಕೃಷ್ಟ ಮಟ್ಟದಲ್ಲಿ ಜೀವನ ಸಾಗಿಸುತ್ತಿರುವ ಅಸಂಖ್ಯ ಜನರು ದೇಶದಲ್ಲಿದ್ದಾರೆ. ಇಂಥ ಸಮಾಜವ್ಯವಸ್ಥೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವಂತಹ ಜನಪರ ಕಾಳಜಿ ಇರುವ ವ್ಯಕ್ತಿಗಳು, ಪಕ್ಷಗಳು, ಸರ್ಕಾರಗಳು ನಮಗೆ ಬೇಕಾಗಿವೆ. ದೊಡ್ಡ ದೊಡ್ಡ ಬಂಗಲೆಗಳನ್ನು, ಮಾಲ್‌ಗಳನ್ನು ಕಟ್ಟಿಸುವ ಜನಪ್ರತಿನಿಧಿಗಳಿಂದ ದೇಶ ಉದ್ಧಾರವಾಗುವುದಿಲ್ಲ. ಇಂದು ಹಣ, ಆಸ್ತಿ, ಅಧಿಕಾರದ ಹಿಂದೋಡುವ ಜನಪ್ರತಿನಿಧಿಗಳ ಸಂಖ್ಯೆ ಹೆಚ್ಚುತ್ತಿದೆ. ಉಳ್ಳವರ, ಇಲ್ಲದವರ ನಡುವಿನ



ಕಂದಕ ದೊಡ್ಡದಾಗಿದೆ. ರಾಜಕಾರಣಿಗಳು ಎಂದರೆ ಅವರು ನಮ್ಮೆಲ್ಲರ ಪ್ರತಿಫಲನವಿದ್ದಂತೆ. ನಾವು ಯಾರನ್ನು ಚುನಾಯಿಸುತ್ತೇವೆಯೋ ಅವರು ಆಡಳಿತ ನಡೆಸುತ್ತಾರೆ. ಎಂಥ ಸರ್ಕಾರವನ್ನು ಆಯ್ಕೆ ಮಾಡಬೇಕೆಂಬ ಪ್ರಜ್ಞೆ ಜನರಲ್ಲಿ ಮೂಡಬೇಕು. ಆಗ ಇಡೀ ವ್ಯವಸ್ಥೆಯಲ್ಲಿ ಬದಲಾವಣೆ ಮೂಡಲು ಸಾಧ್ಯ. ಇಂಥ ಸಮಸ್ಯೆಗಳ ಮೂಲ ಮತ್ತು ಪರಿಹಾರ ಎರಡೂ ಜನರ ಕೈಯಲ್ಲೇ ಇವೆ.

- **ವೈದ್ಯಕೀಯ ಕ್ಷೇತ್ರ ಜನರ ಹಣವನ್ನು ಸುಲಿಗೆ ಮಾಡುವ ದಂಧೆಯಾಗಿ ಬದಲಾಗಿದೆ ಎಂಬುದು ಹಲವರ ವಾದ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

– ಇದು ವಾದವಲ್ಲ, ವಾಸ್ತವ. ಮನುಷ್ಯನ ಧನದಾಹಿ ಚಿಂತನೆಯೇ ಇದಕ್ಕೆ ಮೂಲ ಕಾರಣ. ದಾರಿ ಮತ್ತು ಗುರಿ ಎರಡೂ ಸರಿಯಾಗಿರಬೇಕು. ಆದರೆ ಇಂದು ನಮ್ಮ ಗುರಿ ಸರಿಯಾಗಿದೆ. ದಾರಿ ಸರಿಯಾಗಿಲ್ಲ. ಯಾವ ತಂತ್ರಗಳನ್ನು ಬಳಸಿಯಾದರೂ ಸರಿ, ನಾನು ಗುರಿ ತಲುಪುತ್ತೇನೆ ಎಂಬ ಹಂತವನ್ನು ತಲುಪಿದ್ದೇವೆ. MBBS ಶಿಕ್ಷಣದಿಂದಲೇ ಸುಲಿಗೆ ಆರಂಭವಾಗುತ್ತದೆ. ಲಂಚವನ್ನು ಕೊಟ್ಟು ಸೀಟು ಗಿಟ್ಟಿಸಿಕೊಳ್ಳುವುದು, ಪರೀಕ್ಷೆ ಪಾಸು ಮಾಡಿಕೊಳ್ಳುವುದು ಅವ್ಯಾಹತವಾಗಿ ನಡೆಯುತ್ತಿದೆ. ಇಂಥ ದಾರಿಯಲ್ಲಿ ಬಂದು ವೈದ್ಯರಾದವರು ಪ್ರಾಮಾಣಿಕವಾಗಿ ಕೆಲಸ ಮಾಡಬಲ್ಲರೇ? ಅವರು ಸಹಜವಾಗಿಯೇ ಹಣ ಮಾಡುವ ದಂಧೆಗೆ ಇಳಿಯುತ್ತಾರೆ. ವೃತ್ತಿಧರ್ಮವನ್ನು ಮರೆಯುತ್ತಾರೆ. ಈ ಕಾರಣದಿಂದಲೇ ಇಂದು ವೈದ್ಯಕೀಯ ಕ್ಷೇತ್ರ ಜನರ ಹಣವನ್ನು ಸುಲಿಗೆ ಮಾಡುವ ಹಂತ ತಲುಪಿದೆ.

- **ಎಷ್ಟೋ ಗ್ರಾಮೀಣ ಪ್ರದೇಶಗಳಲ್ಲಿ ಇವತ್ತಿಗೂ ವೈದ್ಯಕೀಯ ಸೇವೆಗಳು ಲಭ್ಯವಿಲ್ಲ. ಉತ್ತರ ಕನ್ನಡ ಜಿಲ್ಲೆ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಜನ ಒಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಾಗಿ ದಶಕಗಳಿಂದ ಹೋರಾಟ ನಡೆಸುತ್ತಿದ್ದಾರೆ. ಸರ್ಕಾರ ಈ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳುತ್ತಿಲ್ಲ. ಇಂಥ ಸಮಸ್ಯೆಗಳು ಈ ಕಾಲಘಟ್ಟದಲ್ಲೂ ಕಾಡುತ್ತಿರುವುದಕ್ಕೆ ಕಾರಣ ಏನು? ಪರಿಹಾರ ಹೇಗೆ?**

– ಆರೋಗ್ಯದ ಬಗ್ಗೆ, ವೈದ್ಯರ ಬಗ್ಗೆ ಮತ್ತು ಆರೋಗ್ಯ ವ್ಯವಸ್ಥೆಯ ಬಗ್ಗೆ ನಮ್ಮ ಸಾಮಾಜಿಕ ನೆಲೆಗಟ್ಟಿನಲ್ಲಿರುವ ಚಿಂತನೆಗಳು ಬದಲಾಗಬೇಕು. ಯಾವುದೇ ಒಬ್ಬ ವೈದ್ಯನಿಗೆ ತಾನು ಹಣ ಮಾಡುವ ಉದ್ದೇಶದಿಂದಲೇ ಈ ವೃತ್ತಿಗೆ ಬಂದಿದ್ದೇನೆ ಎಂಬ ಮನೋಭಾವ ಹೊರಟುಹೋಗಬೇಕು. ಹಿಂದೆಲ್ಲ 500 ಮನೆಗಳಿಗೆ ಒಬ್ಬ ವೈದ್ಯನಿರುತ್ತಿದ್ದ. ಆ 500 ಮನೆಗಳ ಜನ ವೈದ್ಯನನ್ನು, ಆತನ ಕುಟುಂಬವನ್ನು ಸಲಹುತ್ತಿದ್ದರು. ಈ 500 ಮನೆಗಳ ಜನರಿಗೆ ಯಾವುದೇ ಆರೋಗ್ಯ ಸಮಸ್ಯೆ ಎದುರಾದರೂ ಆತ ಅತ್ಯಂತ ಮುತುವರ್ಜಿಯಿಂದ ಅವರಿಗೆ ಚಿಕಿತ್ಸೆ ನೀಡುತ್ತಿದ್ದ. ಅವರಿಂದ ಯಾವುದೇ ಹಣವನ್ನು ಸ್ವೀಕರಿಸುತ್ತಿರಲಿಲ್ಲ. ಆದರೆ ಈಗ ಅಂಥ ಪರಿಸ್ಥಿತಿಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಜಗತ್ತಿನಲ್ಲಿ 43% ಆಪರೇಷನ್‌ಗಳು ಅಗತ್ಯವಿಲ್ಲದೆ ನಡೆಯುತ್ತಿವೆ. ತಪ್ಪು ವ್ಯಾಕ್ಸಿನೇಶನ್ ಕೊಟ್ಟಿದ್ದರಿಂದ 74% ಮರಣ ಆಗಿದೆ ಎಂದು ಲ್ಯಾನ್ಸೆಟ್ ಒಪ್ಪಿಕೊಂಡಿದೆ. ಇದಕ್ಕೆಲ್ಲ ಯಾರು ಹೊಣೆ? ಪರಿಸ್ಥಿತಿ ಹೀಗಿರುವಾಗ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳೇ ಇಲ್ಲದಿದ್ದರೆ ಒಳ್ಳೆಯದೇನೋ, ಅಷ್ಟು ಜನರ ಜೀವವಾದರೂ ಉಳಿಯುತ್ತದೆ ಎನಿಸುತ್ತದೆ. ಅಮೆರಿಕದಲ್ಲಿ ಪ್ರತಿ 100 ಜನರಿಗೆ ಒಬ್ಬ ವೈದ್ಯನಿದ್ದಾನೆ. ಆಫ್ರಿಕಾದಲ್ಲಿ ಪ್ರತಿ 2–3 ಸಾವಿರ ಜನಕ್ಕೊಬ್ಬ ವೈದ್ಯನಿದ್ದಾನೆ. ಅಮೆರಿಕದಲ್ಲಿ ಸಾಯುವವರ ಸರಾಸರಿ ಆಯಸ್ಸು ತುಂಬ ಎತ್ತರದಲ್ಲಿದೆ. ಆದರೆ ಆಫ್ರಿಕಾದಲ್ಲಿ ಸಾಯುವವರ ಸರಾಸರಿ ಆಯಸ್ಸು ತುಂಬ ಕಡಿಮೆಯಿದೆ. 2016ರಲ್ಲಿ ಅಮೆರಿಕದ ಇನ್ಸ್ಟಿಟ್ಯೂಟ್ ಆಫ್ ಮೆಡಿಸಿನ್ ಎಂಬ ಸಂಸ್ಥೆ ಅಮೆರಿಕದಲ್ಲಿ ಜನ ಮರಣ ಹೊಂದಲು ಕಾರಣಗಳು ಯಾವವೆಂದು ಅಧ್ಯಯನ ನಡೆಸಿತು. ಆ ಸಂಶೋಧನೆಯ ಪ್ರಕಾರ ಮೊದಲ ಕಾರಣ ವೈದ್ಯರು, ಎರಡನೆಯ ಕಾರಣ ಔಷಧಗಳ ವ್ಯತಿರಿಕ್ತ ಪರಿಣಾಮ, ಮೂರನೆಯದು ಕ್ಯಾನ್ಸರ್ ಮತ್ತು ನಾಲ್ಕನೆಯ ಕಾರಣ ಹಾರ್ಟ್ ಅಟ್ಯಾಕ್. ಈ ಎಲ್ಲವನ್ನು ಗಮನಿಸಿದರೆ ಹೆಚ್ಚು ಹೆಚ್ಚು ಆಸ್ಪತ್ರೆಗಳು ಇಲ್ಲದಿದ್ದರೇನೇ ಒಳ್ಳೆಯದೇನೋ



ಎನಿಸುತ್ತದೆ. ಹಾಗೆ ಆಸ್ಪತ್ರೆಗಳು ನಿರ್ಮಾಣವಾಗಲೇಬೇಕಿದ್ದರೆ ಅಲ್ಲಿ ಚಿಕಿತ್ಸೆಗಳು ಪೂರ್ತಿ ಉಚಿತವಾಗಿ ದೊರೆಯುವಂತಾಗಬೇಕು. ಜನ ದುಡ್ಡು ಕೊಟ್ಟು ಇಂಥ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವಂತಾದರೆ ಅದು ದೊಡ್ಡ ದಂಧೆಗೆ ದಾರಿ ಮಾಡಿಕೊಡುತ್ತದೆ. ಬಡಜನರಿಂದ ಹಣವನ್ನು ಸುಲಿಗೆ ಮಾಡಲು ನಾವೇ ಅವಕಾಶ ಕೊಟ್ಟಂತಾಗುತ್ತದೆ.

- **ಪ್ರಸಕ್ತ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕವನ್ನು ಪ್ರವೇಶಿಸಿದರೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್) ಔಷಧಗಳನ್ನು ಖರೀದಿಸಿ ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಸಿಲ್ಲ. ಇದರಿಂದಾಗಿ ಕ್ಯಾನ್ಸರ್, ಹೃದಯಾಘಾತ, ಗರ್ಭಕೋಶದ ರಕ್ತಸ್ರಾವ ಸೇರಿದಂತೆ ಹಲವು ಗಂಭೀರ ಕಾಯಿಲೆಗಳಿಗೆ ಔಷಧಗಳು ಸಿಗದೆ ಬಡಜನರು ಪರದಾಡುವಂತಾಗಿದೆ. ಕೇವಲ ಔಷಧಗಳು ಮಾತ್ರವಲ್ಲದೆ ಮೂಲಸೌಕರ್ಯ ಮತ್ತು ಸಿಬ್ಬಂದಿ ಕೊರತೆಯೂ**

**ಸರ್ಕಾರಿ ಆಸ್ಪತ್ರೆಗಳನ್ನು ಕಾಡುತ್ತಿದೆ. ಇದರಿಂದಾಗಿ ಬಡವರು ಖಾಸಗಿ ಆಸ್ಪತ್ರೆಗಳತ್ತ ಮುಖಮಾಡಬೇಕಾಗಿದೆ. ಇಂಥ ಗಂಭೀರ ಸಮಸ್ಯೆಗಳಿಗೆ ಪರಿಹಾರ ಇಲ್ಲವೇ?**

– ಹೌದು, ಇಂಥ ಸಮಸ್ಯೆಗಳು ಜನರನ್ನು ಬಹುವಾಗಿ ಕಾಡುತ್ತಿರುವುದು ಸತ್ಯ. ಆದರೆ ಇದಕ್ಕೆ ಯಾವುದೋ ಪಕ್ಷವನ್ನೋ ಸರ್ಕಾರವನ್ನೋ ರಾಜಕಾರಣಿಗಳನ್ನೋ ದೂಷಿಸುವುದಕ್ಕಿಂತ ಸಮಾಜ ತನ್ನನ್ನೇ ತಾನು ಪ್ರಶ್ನೆ ಮಾಡಿಕೊಳ್ಳಬೇಕು. ಇಂದು ಸಮಾಜದಲ್ಲಿ ನೈತಿಕ ಪ್ರಜ್ಞೆ ಕುಸಿದಿದೆ. ನಮ್ಮ ಮಕ್ಕಳಿಗೆ ಹೇಗಾದರೂ ದೊಡ್ಡವನಾಗಿ ಹಣ ಸಂಪಾದನೆ ಮಾಡು ಎಂಬುದನ್ನು ಹೇಳಿಕೊಟ್ಟೆವೇ ಹೊರತು ಸಮಾಜಕ್ಕೆ ಉಪಯುಕ್ತನಾಗುವಂತಹ ಪ್ರಜೆಯಾಗು ಎಂದು ಹೇಳಿಕೊಡಲಿಲ್ಲ. ಅದರ ಪರಿಣಾಮವಾಗಿಯೇ ಇಂದು ಸಮಾಜದ ಎಲ್ಲ ಕ್ಷೇತ್ರಗಳು ಭ್ರಷ್ಟಾಚಾರದ ಗೂಡಾಗಿವೆ. ಇದಕ್ಕೆ ಕೇವಲ ರಾಜಕಾರಣಿಗಳನ್ನು ದೂಷಿಸಿ ಪ್ರಯೋಜನವಿಲ್ಲ. ರಾಜಕಾರಣಿಗಳು ಲಂಚ ಪಡೆಯುತ್ತಾರೆ ಎಂದು ಅವರನ್ನು ಬೈಯುತ್ತೇವೆ, ಆದರೆ ಲಂಚ ಕೊಟ್ಟವನದ್ದೂ ತಪ್ಪು ಎಂಬುದನ್ನು ಯಾರೂ ಹೇಳುವುದಿಲ್ಲ. ರಾಜಕಾರಣಿಗಳೂ ನಮ್ಮ ಸಮಾಜದ್ದೇ ಒಂದು ಭಾಗ. ಇಡೀ ಸಮಾಜದಲ್ಲಿ ನೈತಿಕ ಪ್ರಜ್ಞೆ ಬೆಳೆದರೆ ಎಲ್ಲ ಕ್ಷೇತ್ರಗಳೂ ಶುದ್ಧವಾಗುತ್ತವೆ. ಅದಕ್ಕೆ ವೈದ್ಯಕೀಯ ಕ್ಷೇತ್ರ ಹೊರತಲ್ಲ.

- **ವೈದ್ಯಕೀಯ ಕ್ಷೇತ್ರದ ಈ ಸಮಸ್ಯೆಗಳಿಗೆ ಹೋಮಿಯೋಪತಿ ಪರಿಹಾರ ನೀಡಬಲ್ಲದೆ? ಉಳಿದ ಚಿಕಿತ್ಸಾ ವಿಧಾನಗಳಿಗಿಂತ ಹೋಮಿಯೋಪತಿ ಹೇಗೆ ಭಿನ್ನ?**

– ಹೋಮಿಯೋಪತಿ ಮನುಷ್ಯನನ್ನು ಮನುಷ್ಯನಂತೆ ನೋಡುತ್ತದೆ. ಬಿಡಿ ಭಾಗಗಳಿಗೆ ಔಷಧ ಕೊಡುವುದಿಲ್ಲ. ಮನುಷ್ಯನನ್ನು ವೈಯಕ್ತಿಕ ಘಟಕ, 'Whole person is a single unit' ಎಂದು ನೋಡುವುದು ಹೋಮಿಯೋಪತಿಯ ವಿಶೇಷತೆ. ಯಾವುದೇ ಔಷಧ ಮನುಷ್ಯನಿಗೆ ಸುಲಭವಾಗಿ ಸಿಗಬೇಕು, ದೇಶದ ಕಟ್ಟಕಡೆಯ ನಾಗರಿಕನಿಗೂ ದೊರಕುವಂತಿರಬೇಕು, ಒಂದು ರೋಗವನ್ನು ಹೋಗಿಸಿ ಮತ್ತೊಂದು ರೋಗವನ್ನು ತರಬಾರದು, ಇರುವ ರೋಗವನ್ನು ಮೂಲೋತ್ಪಾಟನೆ ಮಾಡಬೇಕು. ಇವೆಲ್ಲವನ್ನೂ ಹೋಮಿಯೋಪತಿ ಒಳಗೊಂಡಿದೆ. ಹೋಮಿಯೋಪತಿಯ ಜನಕ ಹಾನಿಮನ್ ಮನಸ್ಸು, ಬುದ್ಧಿ, ದೇಹ ಒಂದೇ; ಇದೆಲ್ಲವನ್ನೂ Vital Force ಎಂಬುದು ಆಳುತ್ತದೆ ಎಂದು ಹೇಳಿದ್ದಾರೆ. ಇದನ್ನೇ ಭಾರತೀಯ ಪರಂಪರೆಯಲ್ಲಿ ಆತ್ಮ ಅಥವಾ ಪ್ರಾಣ ಎಂದು ಕರೆದಿದ್ದೇವೆ. ಹೋಮಿಯೋಪತಿಯ ಚಿಂತನೆ ಭಾರತೀಯ ಸಂಸ್ಕೃತಿಗೆ ಅನುಗುಣವಾಗಿಯೇ ಇದೆ. ಅದನ್ನು ಒಪ್ಪಿಕೊಂಡರೆ ಇಂದು ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ದಂಧೆಗಳಿಗೆ ಕಡಿವಾಣ ಬೀಳಬಹುದು. ಕೇರಳದಲ್ಲಿ ಪ್ರತಿ ತಾಲೂಕಿಗೆ ನೂರು ಹಾಸಿಗೆಯ ಹೋಮಿಯೋಪತಿ ಆಸ್ಪತ್ರೆಯಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳಗಳಲ್ಲಿ ಮೊದಲ ಆದ್ಯತೆಯಾಗಿ ಜನ ಹೋಮಿಯೋಪತಿ ಆಸ್ಪತ್ರೆಗಳಿಗೆ ತೆರಳುತ್ತಾರೆ. ತನ್ನದೇ ಆದ ಅರ್ಹತೆ, ಯೋಗ್ಯತೆ, ಸ್ಥಿರತೆಗಳಿಂದ ಹೋಮಿಯೋಪತಿ ಇವತ್ತು ಸಮಾಜದ ಮುಂದೆ ನಿಂತಿದೆ. ಜನತೆ ಇದನ್ನು ಒಪ್ಪಿಕೊಳ್ಳಬೇಕು. ಹೋಮಿಯೋಪತಿ ಆಸ್ಪತ್ರೆಗಳನ್ನು ಸ್ಥಾಪಿಸುವಲ್ಲಿ ಸರ್ಕಾರವೂ ಗಮನ ಹರಿಸಬೇಕು. ಇದರಿಂದ ಹಲವು ಸಮಸ್ಯೆಗಳಿಗೆ ಅಂತ್ಯ ಹಾಡಲು ಸಾಧ್ಯ.

- **ಇಂದಿನ ದಿನಮಾನದಲ್ಲಿ ಜನರ ಆರೋಗ್ಯಮಟ್ಟ ದಿನೇದಿನೇ ಕುಸಿಯುತ್ತಿದೆ. ಅತ್ಯಂತ ಕ್ಲಿಷ್ಟಕರವಾದ ಆರೋಗ್ಯ ಸಮಸ್ಯೆಗಳಿಗೆ ಮನುಷ್ಯ ತುತ್ತಾಗುತ್ತಿದ್ದಾನೆ. ಇದಕ್ಕೆಲ್ಲ ಕಾರಣ ಏನು? ಇದರಿಂದ ಮನುಷ್ಯ ಹೊರಬರುವುದು ಹೇಗೆ?**

– ಎಲ್ಲ ರೋಗಗಳಿಗೂ ವೈರಸ್ ಅಥವಾ ಬ್ಯಾಕ್ಟೀರಿಯಾ ಕಾರಣ ಎಂಬ ಭ್ರಮೆ ಮನುಷ್ಯನಿಗಿದೆ. ಆದರೆ ಇದನ್ನು ಹೋಮಿಯೋಪತಿ ಒಪ್ಪುವುದಿಲ್ಲ. ಸಮಾಜ, ಕಾರ್ಯಕ್ಷೇತ್ರ ಮತ್ತು ಕುಟುಂಬ – ಈ ಮೂರರ ಜೊತೆ ಮನುಷ್ಯ ಸುಮಧುರವಾದ ಸಂಬಂಧವನ್ನು ಇಟ್ಟುಕೊಳ್ಳಬೇಕು. ಸದಾ



ಚಡಪಡಿಸುವ, ಇರುವುದರಲ್ಲಿ ತೃಪ್ತನಾಗದ, ಎಲ್ಲವೂ ಇದ್ದಾಗಲೂ ಏನಾದರೊಂದು ಆಗಲೇಬೇಕೆಂದು ಬಯಸುವ ವ್ಯಕ್ತಿ ರೋಗಿಯಾಗುತ್ತಾನೆ. ಚಡಪಡಿಸುವಿಕೆಯೇ ಮನುಷ್ಯನ ಅವಿಶ್ರಾಂತ ಸ್ಥಿತಿಗೆ, ಕಾಯಿಲೆಗೆ ಕಾರಣ. ಮನುಷ್ಯ ಒಂದು ವ್ಯವಸ್ಥಿತವಾದ ಜೀವನವಿಧಾನವನ್ನು ಕಲಿತುಕೊಳ್ಳಬೇಕು. ಬದುಕು ಒಳಿತಿನೆಡೆಯ ಧ್ಯಾನದಂತಿರಬೇಕು. ಮನಸ್ಸು ಮಲ್ಲಿಗೆಯಂತಿರಬೇಕು. ಆಗ ಮನುಷ್ಯ ಆರೋಗ್ಯದಿಂದಿರುತ್ತಾನೆ. ಮನುಷ್ಯ ಚೆನ್ನಾಗಿದ್ದರೆ ಆತನ ಕುಟುಂಬ ಚೆನ್ನಾಗಿರುತ್ತದೆ, ಕುಟುಂಬ ಚೆನ್ನಾಗಿದ್ದರೆ ಸಮಾಜ ಚೆನ್ನಾಗಿರುತ್ತದೆ. ಹೀಗೆ ಮನುಷ್ಯನ ಆರೋಗ್ಯ ಮತ್ತು ಸಮಾಜದ ಆರೋಗ್ಯ ಎರಡೂ ಅವನ ಕೈಯಲ್ಲೇ ಇವೆ.

**(ತಮ್ಮ ಅಭಿಪ್ರಾಯವನ್ನು 9611766820ಗೆ ವಾಟ್ಸಾಪ್ ಮಾಡಿ. ಲೇಖನದ ಶೀರ್ಷಿಕೆ, ದಿನಾಂಕ ನಮೂದಿಸಿ)**